**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 01.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಎನ್ ಹೆಚ್ ವಕೀಲರಿಂದಃ**

ನನ್ನ ಅಜ್ಜನ ಹೆಸರು ಏನೆಂದರೆ ಭೀಮಪ್ಪ. ನನ್ನ ಅಜ್ಜನ ತಂದೆಯ ಹೆಸರು ಹನಮಂತಪ್ಪ. ಅವರ ತಂದೆಯ ಹೆಸರೇನು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ಹನಮಂತಪ್ಪ ಇವರ ತಂದೆ ಭೀಮಪ್ಪ ಇವರಿಂದ ಬಂದಂತಹ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ತಾವು ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲೆಗಳನ್ನು ತೋರಿಸಿ ಅವುಗಳಲ್ಲಿ ಆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಅವುಗಳಲ್ಲಿ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನನ್ನ ತಾಯಿಯ ಹೆಸರು ಯಲ್ಲವ್ವ. ಆಕೆಗೆ ನಾವು ಮೂರು ಮಂದಿ ಮಕ್ಕಳು. ಅವರೆಂದರೆ ಗೀತಾ, ವೆಂಕಟೇಶ ಮತ್ತು ಸಂತೋಷ. ನನ್ನ ತಂದೆ ಇರುತ್ತಾರೆ. ಅವರ ಹೆಸರು ಬಸವಣ್ಣೆಪ್ಪ. ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ತಂದೆಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಯವರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ ಎಂದರೆ ಸರಿ. ಸರ್ವೆ ನಂ.750/1 ಇದು ಪಿತ್ರಾರ್ಜಿತ ಆಸ್ತಿ ಎಂದು ಹೇಳಿದ್ದು ಅದು ಪಿತ್ರಾರ್ಜಿತ ಜಮೀನು ಅಲ್ಲ ಪೂಜಾರಿಕೆ ಆಸ್ತಿ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ಸರ್ವೆ ನಂ.750/1 ರಲ್ಲಿ ಒಂದು ಗುಡಿ ಇದೆ ಎಂದರೆ ಸಾಕ್ಷಿ ಗುಡಿ ಇಲ್ಲ ಎನ್ನುತ್ತಾರೆ. ಸದರಿ

ಆಸ್ತಿಯನ್ನು ಪೂಜಾರಿಕೆ ಮಾಡುತ್ತಾರೆ ಎಂಬ ಕಾರಣಕ್ಕೆ ಆಸ್ತಿ ಕೊಟ್ಟಿದ್ದು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಗೋನಾಳ ಗ್ರಾಮದ ಆಸ್ತಿ ಮೊದಲಿಗೆ ಎಷ್ಟಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆನಂತರ ಉತಾರಿನಲ್ಲಿ ಎಷ್ಟಿದೆಯೋ ಅಷ್ಟೇ ಇತ್ತು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಗೋನಾಳ ಗ್ರಾಮದಲ್ಲಿ ಸರ್ವೆ.ನಂ.176/1 ರಲ್ಲಿ 4 ಎಕರೆ 20 ಗುಂಟೆ, 176/2 ರಲ್ಲಿ 2 ಎಕರೆ 10 ಗುಂಟೆ, 176/3 ರಲ್ಲಿ 10 ಎಕರೆ 20 ಗುಂಟೆ ಇದೆ ಎನ್ನುತ್ತಾರೆ. ಸರ್ವೆ ನಂ.176 ರಲ್ಲಿ ಪ್ರತಿವಾದಿ ನಂ.1, 2 ಮತ್ತು 3 ರವರು ದಿಃ 06/08/1986 ರಂದು ಪ್ರತ್ಯೇಕವಾದ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಈ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನು ನೀಲವ್ವ ಕೋಂ ನೀಲಪ್ಪಗೌಡ ಪಾಟೀಲ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ರವರಿಗೆ ತಲಾ 5 ಎಕರೆ 30 ಗುಂಟೆ ರಂತೆ ಮೂರು ಕ್ರಯಪತ್ರಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು ಪ್ರತಿವಾದಿ ನಂ.1 ರಿಂದ 3 ರವರು ಸ್ವಂತ ದುಡಿಮೆ ಮಾಡಿ ಗಳಿಸಿದಂತಹ ಆಸ್ತಿಗಳು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಆಸ್ತಿಗಳನ್ನು ಹಾಗಾದರೆ ಅವರು ಹೇಗೆ ಹಿಡಿದಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಅವುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳುತ್ತಿದ್ದರು ಎನ್ನುತ್ತಾರೆ ಹಾಗೂ ಹೇಗೆ ಹಿಡಿದಿದ್ದಾರೆ ಎಂದು ನನಗೆ ಹೇಳಿಲ್ಲ ಎನ್ನುತ್ತಾರೆ. ಶೆಡ್ಯೂಲ್-ಬ ದಲ್ಲಿ ವಿಪಿಸಿ ನಂ.122 ಎಂದು ತೋರಿಸಿದ್ದು ಅವು ಎಲ್ಲಿಯ ಆಸ್ತಿಗಳು ಎಂದರೆ ಸಾಕ್ಷಿ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ವಿಪಿಸಿ ನಂ.122/1 ಮತುತ 122/2 ಈ ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿಗಳು ಎಂತಹ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಹೂವಿನಶಿಗ್ಲಿ ಗ್ರಾಮ ಸವಣೂರು ತಾಲೂಕ ಹಾಗೂ ಗೋನಾಳ ಗ್ರಾಮಕ್ಕೆ ಯಾವಾಗ

ಹೋಗಿದ್ದಿರಿ ಎಂದರೆ ಸಾಕ್ಷಿ ನಾನು ಸುಮಾರು 8 ವರ್ಷಗಳ ಹಿಂದೆ ಹೋಗಿದ್ದೇನು ಎನ್ನುತ್ತಾರೆ. ಯಾವ ಕಾರಣಕ್ಕೆ ಹೋಗಿದ್ದಿರಿ ಎಂದರೆ ಅಲ್ಲಿ ನನ್ನ ಅಜ್ಜ ಭೀಮಪ್ಪ ಇವರ ಮನೆ ಇತ್ತು ಆ ಮನೆಗೆ ಹೋಗುತ್ತಿದ್ದೇವು ಎನ್ನುತ್ತಾರೆ. ಸದರಿ 8 ವರ್ಷಗಳ ಹಿಂದೆ ನಿಮ್ಮ ಅಜ್ಜ ಭೀಮಪ್ಪ ಇದ್ದರಾ ಎಂದರೆ ಸಾಕ್ಷಿ ಇಲ್ಲ ಅವರು ಮರಣ ಹೊಂದಿ ತುಂಬಾ ವರ್ಷಗಳಾದವು ಎನ್ನುತ್ತಾರೆ. ಸದರಿ ಭೀಮಪ್ಪ 1992 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರು ತೀರಿಕೊಂಡ ನಂತರ ನನ್ನ ಮಾವ ಅಲ್ಲಿ ಇರುತ್ತಾರೆ. ಆ ಕಾರಣಕ್ಕೆ ನಾನು ಅಲ್ಲಿಗೆ ಹೋಗಿದ್ದೇನು ಎನ್ನುತ್ತಾರೆ. ನನ್ನ ಖಾಯಂ ವಾಸ ಉಣಕಲ್ ಹುಬ್ಬಳ್ಳಿ ಎಂದರೆ ಸರಿ. ಪ್ರತಿವಾದಿ ನಂ.1 ರಿಂದ 3 ರವರು ಅವರ ತಂದೆ ಮರಣ ಹೊಂದಿದ ನಂತರ ಅವರ ನಡುವೆ ಕೌಟುಂಬಿಕ ವ್ಯವಸ್ಥಾ ಪತ್ರ ಮಾಡಿಕೊಂಡರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 122/1 ಮತ್ತು 122/02 ಗಳನ್ನು ದಿಃ09/06/1997 ರಲ್ಲಿ ಪ್ರತಿವಾದಿ ನಂ.1 ರಿಂದ 3 ರವರು ಸದಾಶಿವಯ್ಯ ಶಿವಲಿಂಗಯ್ಯ ಮಲ್ಕಿಸಮುದ್ರಮಠ ಇವರಿಂದ ಖರೀದಿ ಹಿಡಿದರು ಎಂದರೆ ಸಾಕ್ಷಿ ಅವರು ಖರೇದಿ ಹಿಡಿದಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಬಗ್ಗೆ ನಿಮ್ಮ ತಾಯಿಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಅವರಿಗೂ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪ್ರತಿವಾದಿ ನಂ.1 ರಿಂದ 3 ರವರು ಖರೀದಿ ಹಿಡಿದ ಆಸ್ತಿಗಳನ್ನು ತಮ್ಮ ತಮ್ಮೊಳಗೆ ಹಿಸ್ಸೆ ಮಾಡಿಕೊಂಡರು ನಂತರ ತಮಗೆ ಬಂದ ಭಾಗದಲ್ಲಿ ತಮ್ಮ ತಮ್ಮ ಮನೆಗಳನ್ನು ಕಟ್ಟಿಸಿಕೊಂಡರು ಎಂದರೆ ಸಾಕ್ಷಿ ಅಲ್ಲಿ ಮನೆ ಇದೆ ಆದರೆ ಉಳಿದ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ 7 ನೇ ಖಂಡಿಕೆಯಲ್ಲಿ ಕೌಟುಂಬಿಕ ವ್ಯವಸ್ಥಾ ಪತ್ರ ಖೊಟ್ಟಿ ಇದೆ ಎಂದು ಹೇಳಿದ್ದು ಅದನ್ನು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಆದರೆ ನನ್ನ ತಾಯಿ ಅದು ನನ್ನ ಅಜ್ಜನ ಆಸ್ತಿ ಎಂದು ಹೇಳುತ್ತಿದ್ದರು

ಎನ್ನುತ್ತಾರೆ. ಅದೇ ರೀತಿ ನನಗೆ ಹಾಗೂ ನನ್ನ 1/5 ಹಿಸ್ಸೆಗೆ ಸದರಿ ಕೌಟುಂಬಿಕ ವ್ಯವಸ್ಥಾ ಪತ್ರ ಬಂಧನಕಾರಿಯಲ್ಲ ಎಂದು ಹೇಳಿರುವುದು ಸುಳ್ಳಿದೆ ನನಗೆ ಆಸ್ತಿಯನ್ನು 1/5 ಹಿಸ್ಸಾ ಇರುವುದೇ ಇಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಕೌಟುಂಬಿಕ ವ್ಯವಸ್ಥಾ ಪತ್ರದ ಪ್ರಕಾರ ಪ್ರತಿವಾದಿ ನಂ.1 ರಿಂದ 3 ರವರು ತಮ್ಮ ತಮ್ಮ ಹೆಸರಿಗೆ ಬಂದ ಜಮೀನುಗಳಿಗೆ ತಮ್ಮ ಹೆಸರುಗಳನ್ನು ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ. ಹೊಲವನ್ನು ಈಗ ಅವರೇ ಮಾಡುತ್ತಿದ್ದಾರೆ ಎಂದರೆ ಸರಿ. 2000 ನೇ ಸಾಲಿನಿಂದ ಸದರಿ ಹೊಲವನ್ನು ಅವರೇ ಮಾಡುತ್ತಿದ್ದಾರೆ ಎಂದರೆ ಸರಿ.

ಅಸಲು ದಾವಾ ನಂ.309/1988 ರಲ್ಲಿ ರಾಜೀಯಾದ ಪ್ರಕಾರ ನನ್ನ ತಾಯಿಯವರು ಕೂಡ ನಡೆದುಕೊಂಡಿದ್ದಾರೆ ಹಾಗೂ ಪ್ರತಿವಾದಿ ನಂ.1 ರಿಂದ 3 ರವರು ಹಾಗೂ ಮತ್ತೊಬ್ಬ ನನ್ನ ದೊಡ್ಡಮ್ಮ ಕೂಡ ನಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನಡೆದುಕೊಂಡಿದ್ದಾರೆ ಎನ್ನುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**